ಅದು ಎರಡೂವರೆ ಎಂದು ತೋರಿಸುತ್ತಿತ್ತು. ಅದಕ್ಕೆ ಒತ್ತಿಕೊಂಡಿರುವ ಕೋಣೆ ಜ್ಯೂನಿಯರ್ ವಕೀಲರುಗಳಿಗಾಗಿ. ಅದಕ್ಕೆ ಹೊಂದಿಕೊಂಡು ಇದ್ದ ಬೆಲೆಬಾಳುವ ಮರದ ಬಾಗಿಲಿನಲ್ಲಿ ಚಿನ್ನದ ರಂಗಿನಲ್ಲಿ 'ಕಲಿಯಂಡ ಸೋಮಯ್ಯ' ಎಂಬ ಅಕ್ಷರಗಳು ಅದು ಆತನ ಚೇಂಬರ್ ಎಂಬುದನ್ನು ಸೂಚಿಸುತ್ತಿತ್ತು.

"ಸರ್, ಇದು ಸೋಮಯ್ಯನ ಕ್ಯಾಬಿನ್... ಇಲ್ಲಿ ಒಳಗೆ ಬನ್ನಿ..."

ಡಿಸೋಜ ನಮ್ಮನ್ನು ಒಳಗೆ ಕರೆದೊಯ್ದ. ತನ್ನ ಚೇಂಬರಿನಲ್ಲಿಯೇ ತಾನು ಕುಳಿತಿದ್ದ ಕುರ್ಚಿಯಲ್ಲಿಯೇ ಕೊಲೆಯಾಗಿದ್ದ ಸೋಮಯ್ಯ. ಆತ ಮೇಜಿನ ಮೇಲೆ ಮುಖವನ್ನು ಬಲಗಡೆಗೆ ಅಡ್ಡವಾಗಿಸಿ ಒರಗಿದ್ದ. ಎಡಗಿವಿಯ ಬಳಿಯಿಂದ ನೆತ್ತರು ಒಸರಿ, ಮೇಜಿನಿಂದ ಇಳಿದು, ನೆಲದ ಮೇಲೆಲ್ಲಾ ಹರಡಿತ್ತು. ಆತನ ಕೈ ಆಂಗ್ಲ ಭಾಷೆಯ ಎಲ್ ಅಕ್ಷರದ ಆಕಾರದಲ್ಲಿ ತಲೆಯ ಮೇಲು ಭಾಗದಲ್ಲಿದ್ದರೆ, ಬಲಗೈ ಮೇಜಿನ ಪಕ್ಕದಲ್ಲಿ ನೇತಾಡುತ್ತಿತ್ತು. ಪ್ರಾಯಶಃ ಗುಂಡು ತಾಗಿದೊಡನೆ ಆತ ದೊಪ್ಪನೆ ಮೇಜಿನ ಮೇಲೆ ಕುಸಿದಿರಬೇಕು! ಆತ ಕುಳಿತ ಜಾಗದಿಂದ ಅನತಿ ದೂರದಲ್ಲಿದ್ದ ಕಿಟಕಿಯ ಬಾಗಿಲು ತೆರೆದುಕೊಂಡಿತ್ತು. ಕಿಟಕಿಯ ಹೊರಗಡೆ ಉದ್ದನೆಯ ಪ್ಯಾಸೇಜು. ಅದು ಕಟ್ಟಡದ ಹಿಂಭಾಗದಲ್ಲಿದ್ದ ಕಚೇರಿಗಳಿಗೆ ಹೋಗುವ ಮಾರ್ಗವಾಗಿತ್ತು. ಪಕ್ಕದಲ್ಲಿ ಚಿಕ್ಕದೊಂದು ಚರಂಡಿಯಿದ್ದು, ಅದಕ್ಕೆ ತಾಗಿಕೊಂಡು ಹಳೆಯ ಕಟ್ಟಡವೊಂದಿತ್ತು.

ಕರಮಚಂದ ಕೈಗೆ ಗ್ಲೌಸ್ ಧರಿಸಿಕೊಂಡು, ಸೋಮಯ್ಯನ ತಲೆಯನ್ನು ಮೆಲ್ಲಗೆ ಸರಿಸಿ, ಭೂತಕನ್ನಡಿಯಿಂದ ಕಿವಿಯ ಬಳಿಯಲ್ಲಾದ ಗಾಯವನ್ನು ಆಳವಾಗಿ ಪರಿಶೀಲಿಸಿದ. ಹಲವು ಕೋನಗಳಲ್ಲಿ ಅದನ್ನು ಪರೀಕ್ಷಿಸಿ, ಕೊನೆಗೆ ತೃಪ್ತಿಗೊಂಡವನಂತೆ ಮುಗುಳ್ನಗೆ ಬೀರಿದ. ಪರಿಶೀಲನೆ ಮುಗಿಸಿದವನೇ, ಕಿಟಕಿಯ ಬಳಿ ಬಂದು, ಒಮ್ಮೆ ಹೊರಕ್ಕೆ ಸುತ್ತಲೂ ಕಣ್ಣು ಹಾಯಿಸಿದ.

ನಂತರ ಕರಮಚಂದನ ಹುಡುಕಾಟ ಕ್ಯಾಬಿನ್‌ನಲ್ಲಿ ಮುಂದುವರೆಯಿತು. ಬೆನ್ನು ಬಾಗಿಸಿ, ಅಂಗುಲವನ್ನೂ ಬಿಡದಂತೆ, ಸುಳಿವಿಗಾಗಿ ತಡಕಾಡಿದ. ನಾನೂ ಎಚ್ಚರಿಕೆಯಿಂದ ಕಣ್ಣು ಹಾಯಿಸಿದೆ. ಎಲ್ಲಿಯೂ ಸಿಸಿಟೀವಿ ಕ್ಯಾಮೆರಾ ಕಾಣಿಸಲಿಲ್ಲ! ಇಷ್ಟೊಂದು ಶ್ರೀಮಂತ ವಕೀಲ, ಅದೂ ಸದಾ ಕ್ರಿಮಿನಲ್ಲುಗಳೊಂದಿಗೆ ವ್ಯವಹರಿಸುವಾತ, ಸಿಸಿಟೀವಿ ಕ್ಯಾಮೆರಾ ಹಾಕಿಸದೇ ಇದ್ದಿದು ಕಂಡು ಸೋಜಿಗವೆನಿಸಿತು.

"ಬಿದ್ದಪ್ಪ, ಇಲ್ಲಿ ನೋಡು, ಇದೇನಿದು..."

ಸೋಮಯ್ಯನ ಕುರ್ಚಿಯ ಕಾಲಿನ ಸನಿಹ ತಲೆ ಹುದುಗಿಸಿದ್ದ ಕರಮಚಂದ ನನ್ನನ್ನು ಕರೆದ. ನಾನು ಆತ ಬೊಟ್ಟು ಮಾಡಿದ ಜಾಗದತ್ತ ಕಣ್ಣು ಹೂಡಿದೆ. ನನಗೆ ಅಲ್ಲೇನೂ ವಿಶೇಷ ಗೋಚರಿಸಲಿಲ್ಲ! ಕರಮಚಂದ ಜೇಬಿನಿಂದ ಪೆನ್ ಟಾರ್ಚ್ ತೆಗೆದು, ಬೆಳಕು ಚಿಮ್ಮಿಸಿದ. ಆಗ ನೆಲದಲ್ಲಿ ಕೆಲವು ಗೀರುಗಳು, ಪುಟ್ಟದಾದ ತೂತುಗಳು ಕಂಡವು. ಎರಡೂ ಕಾಲಿನ ಎರಡೂ ಬದಿಗಳಲ್ಲಿ ಅಂತಹ ಗುರುತುಗಳಿದ್ದವು.

"ಅದೇನದು?" ನಾನು ಕೇಳಿದೆ.

"ಅರ್ಥವಾಗುತ್ತಿಲ್ಲ. ಹೊಸ ಕಚೇರಿಯ ನೆಲದಲ್ಲಿ ಈ ಗೀರುಗಳು, ತೂತು ಹೇಗಾಯಿತು?"

ಅಷ್ಟರಲ್ಲಿ ಡಿಸೋಜನೂ ಬಂದು, ಅದನ್ನು ಗಮನಿಸಿ, ದೊಡ್ಡದಾಗಿ ನಗು ತೂರಿ ನುಡಿದ,

"ನೀವ್ಯಾಕೆ ಜುಜುಬಿ ವಿಷ್ಯಗಳ ಬಗ್ಗೆ ತಲೆ ಕೆಡಿಸಿಕೊಳ್ತೀರಿ? ನೋಡಿ, ಕುರ್ಚಿಯ ಬುಷ್ ಹೋಗಿದೆ. ಅದರಿಂದಾಗಿ ನೆಲದಲ್ಲಿ ಗೀರುಗಳು ಮೂಡಿವೆ. ಇಷ್ಟೊಂದು ಶ್ರೀಮಂತ ವಕೀಲನಾದರೂ, ಸೋಮಯ್ಯ ಈ ಹಳೆಯ ಮಾದರಿಯ ನೆಟ್ ಕುರ್ಚಿಯನ್ನೇ ಬಳಸ್ತಿದ್ದಾನೆ. ಈಗ ಎಲ್ಲೆಡೆಯೂ ರಿವಾಲ್ವಿಂಗ್ ಕುರ್ಚಿಗಳೇ ಇರೋದು... ಸೋಮಯ್ಯ ಸ್ವಲ್ಪ ಜಿಪುಣ ಅಂತ ಕೇಳಿದೀನಿ..."

"ಡಿಸೋಜ, ಚಿಕ್ಕ ಚಿಕ್ಕ ವಿಷ್ಯಗಳೂ ಕೆಲವೊಮ್ಮೆ ದೊಡ್ಡ ರಹಸ್ಯ ಅಡಗಿಸಿಟ್ಟುಕೊಂಡಿರುತ್ತವೆ ಅನ್ನೋದು ನನ್ನ ಅನುಭವ... ಸೋಮಯ್ಯ ಬ್ರಹ್ಮಚಾರಿ ಅಂತ ಕೇಳಿದ್ದೀನಿ..."